ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ಇಂಡಿ.
ಇವರ ನ್ಯಾಯಾಲಯದಲ್ಲಿ.

ಸಿ.ಸಿ.ನಂ. : 302/2019
ಪ್ರಾಸಾ : 06
ಚಾ.ಸಾ.: 07

ಸಾಕ್ಷಿದಾರರ ಹೆಸರು : ಮೀರಾಸಾಬ ತಂದೆ ಮಹೆಬೂಬಸಾಬ ಬಾಬಾನಗರ

ವಯಸ್ಸು : 29 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಇಂಚಗೇರಿ

(ಈ ದಿವಸ ದಿನಾಂಕ 06.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:**

2) ಚಾಸಾ-1 ನನ್ನ ಅಣ್ಣ. ಚಾಸಾ-4 ನನ್ನ ತಂದೆ. ಆರೋಪಿತರ ಪರಿಚಯ ಇದೆ. 1 ನೇ ಆರೋಪಿಯು ಚಾಸಾ-1 ರವರ ಹೆಂಡತಿ. 2 ನೇ ಆರೋಪಿಯು ನನ್ನ ಅತ್ತೆಯಾಗಬೇಕು.

3) ಕಳೆದ 5 ವರ್ಷಗಳ ಹಿಂದೆ ಮುಂಜಾನೆ 9-30 ಗಂಟೆಗೆ ಚಾಸಾ-5 ಮತ್ತು 6 ರವರು ನನಗೆ ದೂರವಾಣಿ ಕರೆ ಮಾಡಿ ಆರೋಪಿತರು ಆಸ್ತಿಯ ವಿಚಾರ ಜಗಳ ತೆಗೆದು ನನ್ನ ತಂದೆಯಾದ ಚಾಸಾ-4 ರವರಿಗೆ ಇಂಚಗೇರಿ ಗ್ರಾಮದ ಬಸ್ ನಿಲ್ದಾಣ ಬಳಿ ಹಲ್ಲೆ ಮಾಡಿರುತ್ತಾರೆ, ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಬೇಗ ಬಾ ಎಂದು ತಿಳಿಸಿರುತ್ತಾರೆ. ನಂತರ ನಾನು ನನ್ನ ತಂದೆಯನ್ನು ಯಾರು ಹಲ್ಲೆ ಮಾಡಿದರು ಎಂದು ಕೇಳಿದಾಗ ಆರೋಪಿತರು ಆಸ್ತಿ ಸಂಬಂಧ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾನು ನನ್ನ ತಂದೆಯನ್ನು ವಿಜಯಪುರದ ಅಲ್ ಅಮಿನ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಗೆ ಕರೆದುಕೊಂಡು ಹೋಗಿ

ದಾಖಲಿಸಿರುತ್ತೇನೆ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲು : ಶ್ರೀ. ಪಿ.ಡಿ.ಎಲ್.ವಕೀಲರಿಂದ : ಆರೋಪಿತರ ಪರವಾಗಿ:</u>**

4) ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಯಾವ ದಿನಾಂಕದಂದು ಘಟನೆಯಾಯಿತು ಎಂದು ನಿರ್ದಿಷ್ಟವಾಗಿ ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆಯ ಜೊತೆ ಆಸ್ಪತ್ರೆಯಲ್ಲಿ ನಾನೇ ಇದ್ದೆ. ಸುಮಾರು 8-10 ದಿನಗಳ ನಂತರ ನನ್ನ ತಂದೆ ಆಸ್ಪತ್ರೆಯಿಂದ ಡಿಸ್ ಚಾರ್ಜ್ ಆಗಿರುತ್ತಾರೆ. ನಾನು ಗಲಾಟೆಯಾಯಿತು ಎಂದು ಹೇಳುವ ಘಟನೆಯನ್ನು ನಾನು ಖುದ್ದು ನೋಡಿರುವುದಿಲ್ಲ. 1 ನೇ ಆರೋಪಿಯು ನನ್ನ ಅಣ್ಣನಾದ ಚಾಸಾ-1 ರವರ ವಿರುದ್ಧ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. 1 ನೇ ಆರೋಪಿಯನ್ನು ಜೀವನಾಂಶ ಪ್ರಕರಣವನ್ನು ವಾಪಸ್ ತೆಗೆದುಕೊಳ್ಳುವಂತೆ ಆಕೆಯನ್ನು ಬಲವಂತಪಡಿಸಿ ಸುಳ್ಳು ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಣ್ಣನು ಆಕೆಗೆ ಹೆದರಿಸಿ ಜೀವನಾಂಶ ಪ್ರಕರಣವನ್ನು ವಾಪಸ್ ತೆಗೆಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸುಮಾರು 12-00 ಗಂಟೆ ಸುಮಾರಿಗೆ ನಾವು ವಿಜಯಪುರದ ಆಸ್ಪತ್ರೆಗೆ ಹೋಗಿರುತ್ತೇವೆ.

5) ಆರೋಪಿತರು ಯಾವುದೇ ಗಲಾಟೆ ಮಾಡಿಲ್ಲ ಮತ್ತು ಯಾವುದೇ ಹಲ್ಲೆ ಮಾಡಿಲ್ಲ ಅವರ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

**(ದೇವರಾಜು ಹೆಚ್.ಆರ್.)**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ಇಂಡಿ.
ಇವರ ನ್ಯಾಯಾಲಯದಲ್ಲಿ.

ಸಿ.ಸಿ.ನಂ. : 302/2019
ಪ್ರಾ.ಸಾ : 05
ಚಾ.ಸಾ.: 03

ಸಾಕ್ಷಿದಾರರ ಹೆಸರು : ಮೌಲಾಲಿ ತಂದೆ ಸೈಯದಸಾಬ ವಾಲೀಕಾರ

ವಯಸ್ಸು : 52 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಇಂಚಗೇರಿ

(ಈ ದಿವಸ ದಿನಾಂಕ 06.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:**

6) ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ದಿ : 29-03-2018 ರಂದು ನಾನು ನಿಪಿ-1 ಕ್ಕೆ ಇಂಚಗೇರಿ ಬಸ್ ನಿಲ್ದಾಣದ ಬಳಿ ಪೊಲೀಸರು ಚಾಸಾ-4 ಮತ್ತು ಆರೋಪಿತರ ನಡುವೆ ಆದ ಗಲಾಟೆಯ ವಿಚಾರವಾಗಿ ಪಂಚನಾಮೆ ಕ್ರಮ ಜರುಗಿಸಲು ಬೆಳಿಗ್ಗೆ 8-30 ರಿಂದ 9-30 ಗಂಟೆಗೆ ಬಂದ ಸಮಯದಲ್ಲಿ ಸಹಿ ಮಾಡಿರುತ್ತೇನೆ.

7) ಪೊಲೀಸರಿಗೆ ಪಂಚನಾಮೆ ಕ್ರಮ ಜರುಗಿಸಲು ಚಾಸಾ-5 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿರುತ್ತಾರೆ. ಜಾಗವನ್ನು ಪರಿಶೀಲನೆ ಮಾಡಿ ಅಲ್ಲಿ ಇದ್ದ ಕಲ್ಲನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡು ಪಂಚನಾಮೆ ಮಾಡಿರುತ್ತಾರೆ. ನನ್ನ ಜೊತೆ ಚಾಸಾ-2 ಇದ್ದರು. ಕಲ್ಲನ್ನು ನೋಡಿದರೆ ಈಗ ಗುರುತಿಸಲಾಗುವುದಿಲ್ಲ.

ಸಾಕ್ಷಿ ಮುಂದುವರೆದ ಬಹಳ ದಿನಗಳಾದ ಕಾರಣ ಗುರುತಿಸಲಾಗುವುದಿಲ್ಲ ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲು : ಶ್ರೀ. ಪಿ.ಡಿ.ಎಲ್.ವಕೀಲರಿಂದ : ಆರೋಪಿತರ ಪರವಾಗಿ:</u>**

8) ಚಾಸಾ-1 ನನ್ನ ಸಂಬಂಧಿ ಅಲ್ಲ. ಘಟನೆಯು ಪಂಚನಾಮೆ ಕ್ರಮ ಜರುಗಿಸುವ 2 ದಿನಗಳ ಮುಂಚೆ ಆಗಿರುತ್ತದೆ ಎಂದು ಪೊಲೀಸರು ತಿಳಿಸಿರುತ್ತಾರೆ. ಪಂಚನಾಮೆ ಕ್ರಮ ಜರುಗಿಸಲು ಪೊಲೀಸರೇ ಕರೆದಿರುತ್ತಾರೆ. ಗುನ್ನಾ ಸ್ಥಳದ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಅಂಗಡಿ ಮತ್ತು ದಕ್ಷಿಣಕ್ಕೆ ಒಂದು ವೃತ್ತಾಕಾರದ ರಸ್ತೆ ಇದೆ.

9) ನನ್ನ ಸಮಕ್ಷಮ ಯಾವುದೇ ಪಂಚನಾಮೆ ಕ್ರಮ ಜರುಗಿಸಿಲ್ಲ, ನಾನು ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

**(ದೇವರಾಜು ಹೆಚ್.ಆರ್.)**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.